# ಶ್ರೀಮಾತೆಯವರ ಪ್ರೀತಿ:
# ನಾನು ಕೇಳಿದ ಎರಡು ಘಟನೆಗಳು

ಬಂಗಾಳಿ ಮೂಲ : **ಶಿವಪ್ರಸಾದ ಚಟ್ಟೋಪಾಧ್ಯಾಯ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**



**ಕ**ರುಣಾಮಯಿ ಶ್ರೀಮಾತೆಯವರನ್ನು ಕುರಿತ ಎರಡು ಘಟನೆಗಳು ನೆನಪಾಗುತ್ತಿವೆ. ಮೊದಲನೆಯದು, ನನ್ನ ತಂದೆಯವರಿಂದಲೇ ನಾನು ಕೇಳಿದ ಘಟನೆ. ಪೂಜ್ಯ ಸ್ವಾಮಿ ಗೌರೀಶ್ವರಾನಂದರು (ರಾಮಮಯ ಮಹಾರಾಜ್) ಕೂಡ ಒಂದು ಪತ್ರದಲ್ಲಿ ಈ ಘಟನೆ ಸತ್ಯವೆಂಬುದನ್ನು ನನಗೆ ಬರೆದು ತಿಳಿಸಿದ್ದಾರೆ. ಎರಡನೆಯದು, ನಾನು ಬೇರೆಯವರಿಂದ ಕೇಳಿದ ಘಟನೆ.

ನನ್ನ ತಂದೆ ಪ್ರಬೋಧಚಂದ್ರ ಚಟ್ಟೋಪಾಧ್ಯಾಯರು ಜಯರಾಮಬಾಟಿಗೆ ಸಮೀಪದಲ್ಲಿದ್ದ, ಹುಗ್ಲಿ ಜಿಲ್ಲೆಯ ಶ್ಯಾಮಬಜಾರ್ ಗ್ರಾಮದಲ್ಲಿ ವಾಸವಾಗಿದ್ದರು. ನನ್ನ ತಂದೆ ಹಾಗೂ ತಾಯಿ ಇಬ್ಬರೂ ಶ್ರೀಮಾತೆಯವರಿಂದ ದೀಕ್ಷೆ ಪಡೆದು ಅವರ ಕೃಪೆಗೆ ಪಾತ್ರರಾಗಿದ್ದರು. ಶ್ರೀಮಾತೆಯವರ ಪ್ರೇರಣೆಯಿಂದಲೇ ನನ್ನ ತಂದೆಯವರು ತುಂಬ ಹಿಂದುಳಿದಿದ್ದ ಬದನ್‌ಗಂಜ್ ಗ್ರಾಮದಲ್ಲಿ ೧೯೧೦ರಲ್ಲಿ ಒಂದು ಇಂಗ್ಲಿಷ್ ಪ್ರೌಢಶಾಲೆಯನ್ನು ಆರಂಭಿಸಿದ್ದರು. ಅವರೇ ಆ ಶಾಲೆಯ ಮೊದಲ ಮುಖ್ಯೋಪಾಧ್ಯಾಯರಾಗಿದ್ದರು. ಆ ಶಾಲೆಯ ಮೊದಲ ಸಾಲಿನ ವಿದ್ಯಾರ್ಥಿಯಾಗಿದ್ದರು ಸ್ವಾಮಿ ಗೌರೀಶ್ವರಾನಂದರು. ಅವರು ಅನೇಕ ದಿನ ಶ್ರೀಮಾತೆಯವರ ಬಳಿ ಕಳೆಯುತ್ತಿದ್ದರು. ನನ್ನ ತಂದೆಯವರು ಆ ಭಾಗದ ಯೂನಿಯನ್ ಬೋರ್ಡ್‌ನ ಅಧ್ಯಕ್ಷರೂ ಆಗಿದ್ದರು.

ಸಣ್ಣವನಾಗಿದ್ದಾಗ ನಾನು ತಂದೆಯಿಂದ ಕೇಳಿದ್ದೆ – ಒಂದು ದಿನ ಅವರು ಜಯರಾಮಬಾಟಿಯಲ್ಲಿ ಶ್ರೀಮಾತೆಯವರ ಮನೆಯಲ್ಲಿದ್ದರು. ಅಷ್ಟರಲ್ಲಿ ಒಬ್ಬ ವ್ಯಕ್ತಿ ಬಂದು, ಒಂದು ಪತ್ರವನ್ನು ನನ್ನ ತಂದೆಯ ಕೈಗೆ ಕೊಟ್ಟ. ಅದರಲ್ಲಿ ಬರೆದಿತ್ತು, ಅಂದೇ ತಂದೆಯವರು ಊರಿಗೆ ಹಿಂದಿರುಗಿ ಹೋಗಬೇಕು, ಅಂದು ಕತ್ತಲಾದ ಮೇಲಾದರೂ ಸರಿ – ಎಂದು. ಅಂತೆಯೇ ನನ್ನ ತಂದೆ ಮರಳಿ ಹೋಗಲು ಸಿದ್ಧರಾಗಿ, ಶ್ರೀಮಾತೆಯವರಿಗೆ ಪ್ರಣಾಮ ಮಾಡಲು ಹೋದರು. ಏನೇನೋ ಕಾರಣಗಳಿಂದ ಹಳ್ಳಿಯ ಜನರು ನನ್ನ ತಂದೆಯವರಿಗೆ ವಿರುದ್ಧವಾಗಿದ್ದರು. ಅನಂತರ ತಿಳಿದು ಬಂತು, ಅಂದು ರಾತ್ರಿ ಕಾಲುವೆಯ ಬಳಿ ನನ್ನ ತಂದೆಯವರ ಕೊಲೆ ಮಾಡಲು ಪಿತೂರಿ ನಡೆಸಿ, ಅವರಿಗೆ ಪತ್ರ ಕಳುಹಿಸಲಾಗಿತ್ತು – ಎಂದು. ಪತ್ರದ ಬಗ್ಗೆ ಕೇಳಿದ ಶ್ರೀಮಾತೆ ಕೇಳಿದರು, ''ಯಾರ ಪತ್ರ, ಅವರ ಕೈ ಬರಹದ ಪರಿಚಯ ನಿನಗಿದೆಯೆ?'' ನನ್ನ ತಂದೆ ಹೇಳಿದರು, ''ಹೌದಮ್ಮಾ, – ಇಂಥವನದು.'' ''ಯಾರು ಪತ್ರವನ್ನು ತೆಗೆದುಕೊಂಡು ಬಂದ, ಅವನ ಪರಿಚಯವಿದೆಯೆ?'' ''ಇಲ್ಲಮ್ಮಾ, ನನಗೆ ಪರಿಚಯವಿಲ್ಲ.'' ಆಗ ಶ್ರೀಮಾತೆ ಹೇಳಿದರು, ''ಬೇಡ ಮಗೂ, ಇಂದು ರಾತ್ರಿ ನೀನು ಹೋಗಬೇಡ. ನಾಳೆ ಬೆಳಿಗ್ಗೆ ಬೇರೆ ದಾರಿಯ ಮೂಲಕ, ಮೊರಾಗೆರೆ ಮೂಲಕ ನೀನು ಚೌಕೀದಾರ ಅಂಬಿಕ ಹಾಗೂ ರಾಮಮಯನನ್ನು ಜೊತೆಯಲ್ಲಿ ಕರೆದುಕೊಂಡು ಹೋಗು.'' ನನ್ನ ತಂದೆಯವರು ಶ್ರೀಮಾತೆಗೆ ಪ್ರಣಾಮ ಮಾಡಿ ಹೇಳಿದರು: ''ಇಲ್ಲಮ್ಮಾ, ಇವತ್ತು ನಾನು ಹೋಗಲಾರೆ, ನಿಮ್ಮ ಮಾತಿನಂತೆ ನಾಳೆಯೇ ಹೋಗುತ್ತೇನೆ.'' ಶ್ರೀಮಾತೆಯವರ ಆದೇಶದಂತೆ, ನನ್ನ ತಂದೆ ಆ ದಿನ ಅಲ್ಲೇ ತಂಗಿದ್ದು, ಮರುದಿನ ಬೆಳಿಗ್ಗೆ ಚೌಕಿದಾರ ಅಂಬಿಕ ಹಾಗೂ ರಾಮಮಯ ಮಹಾರಾಜರೊಂದಿಗೆ ಮೊರಾಗೆರೆಗೆ ಹೋಗುವ ದಾರಿಯ ಮೂಲಕ ಊರಿಗೆ ಮರಳಿದರು. ತಂದೆ ಹೇಳುತ್ತಿದ್ದರು: ''ಏನೇ ಆಗಲಿ, ಶ್ರೀಮಾತೆಯವರ ಆದೇಶವನ್ನು ಮೀರಲು ನನಗೆ ಎಂದಿಗೂ ಸಾಧ್ಯವಾಗುತ್ತಿರಲಿಲ್ಲ.'' ಅಂದು ರಾತ್ರಿ ಅವರ ಹತ್ಯೆಗೆ ಸಂಚು ನಡೆದಿತ್ತು ಎಂದು ಆಗ ಇನ್ನೂ ಅವರಿಗೆ ಗೊತ್ತಾಗಿರಲಿಲ್ಲ. ಆದರೆ ಎಲ್ಲವನ್ನೂ ತಿಳಿದ, ಎಲ್ಲವನ್ನೂ ನೋಡಬಲ್ಲ ಶ್ರೀಮಾತೆಯವರಿಗೆ ಅದು ತಿಳಿದಿತ್ತು. ಆದ್ದರಿಂದಲೇ ಅಂದು ರಾತ್ರಿ ಊರಿಗೆ ಮರಳದಂತೆ ಅವರನ್ನು ತಡೆದಿದ್ದರು. ಅನಂತರ ನಾನು ತಂದೆಯವರಿಂದ ಕೇಳಿದೆ, ಒಂದು ಘಟನೆ ನಡೆದಂತೆ ಕಲ್ಪಿಸಿಕೊಂಡು, ಅವರಿಗೆ ಸುದ್ದಿ ನೀಡಿ, ಅದ

ರಿಂದ ತಂದೆ ಅದೇ ದಿನ ರಾತ್ರಿ ಆ ರಸ್ತೆಯ ಮೂಲಕ ಹೋಗುವಂತೆ ಮಾಡಲು ಸಂಚು ನಡೆದಿತ್ತು, ಎಂದು.

ನಾನು ಈ ಘಟನೆಯ ಬಗ್ಗೆ ಕೇಳಿದ್ದುದು ತುಂಬ ಚಿಕ್ಕವನಿದ್ದಾಗ. ಆಗ ನನಗೆ ಶ್ರೀಮಾತೆಯವರ ಈಶ್ವರೀ ಶಕ್ತಿಯ ಬಗ್ಗೆ ಯಾವ ಕುತೂಹಲವೂ ಉಂಟಾಗಿರಲಿಲ್ಲ. ನನ್ನ ತಂದೆಯವರು ತೀರಿಕೊಂಡು ಸುಮಾರು ಮೂವತ್ತೆಂಟು ವರ್ಷಗಳಾದ ನಂತರ, ರಾಮಮಯ ಮಹಾರಾಜರಿಂದ ಈ ಘಟನೆಯ ಸತ್ಯತೆಯನ್ನು ತಿಳಿಯಲು, ನಾನು ೨೯.೧೧.೧೯೮೪ ರಂದು ಒಂದು ಪತ್ರವನ್ನು ಬರೆದೆ. ಅದಕ್ಕೆ ಅವರು ೫.೧೨. ೧೯೮೪ ರಂದು ಜಯರಾಮಬಾಟಿಯಿಂದ ಪತ್ರದ ಮೂಲಕ ಉತ್ತರ ಬರೆದರು. ಅದರ ಕೆಲವು ಭಾಗಗಳು ಹೀಗಿವೆ: ''ಹೌದು, ಶ್ರೀಮಾತೆಯವರು ಪೂಜ್ಯ ಮಾಸ್ಟರ್ ಮಹಾಶಯರಿಗೆ (ನನ್ನ ತಂದೆ) ರಾತ್ರಿ ಹೊರಡಬೇಡವೆಂದು ಹೇಳಿದ್ದರು, ಮರುದಿನ ಬೆಳಿಗ್ಗೆ ಅವರು ನನ್ನನ್ನು ಹಾಗೂ ಚೌಕಿದಾರ್ ಅಂಬಿಕನನ್ನು ಜೊತೆಗೆ ಕರೆದುಕೊಂಡು, ಮೊರಾಗೆರೆ ದಾರಿಯಲ್ಲಿ ಹೋಗಲು ಶ್ರೀಮಾತೆ ಹೇಳಿದ್ದರು, ನಾವು ಹಾಗೆಯೇ ಹೊರಟಿದ್ದೆವು.. ಈ ಘಟನೆ ನಡೆದುದು ೧೯೧೭ರಲ್ಲಿ.''

* * *

ಇನ್ನೊಂದು ಘಟನೆಯನ್ನು ಈಗ ಹೇಳುತ್ತೇನೆ. ನಮ್ಮ ಮನೆಯಲ್ಲಿ ತಂದೆಯವರ ಕೈಕೆಳಗೆ ಒಬ್ಬ ವೃದ್ಧ ಬಾಗ್ದಿ (ಕೆಳಜಾತಿ) ಇದ್ದ; ಅವನನ್ನು ನಾವು ಚಿಕ್ಕಂದಿನಿಂದಲೇ ಶಿವ-ಕಾಕಾ ಎಂದು ಕರೆಯುತ್ತಿದ್ದೆವು. ಅವನೂ ಜೀವನಪರ್ಯಂತ ನಮ್ಮನ್ನು 'ನೀನು, ನೀನು' ಎಂದೇ ಹೆಸರು ಹಿಡಿದು ಕರೆಯುತ್ತಿದ್ದ. ಅವನು ಹಿಂದೆ ಡಕಾಯಿತನಾಗಿದ್ದ ಎಂದು ಕೇಳಿದ್ದೆ. ಅನಂತರ ಶ್ರೀಮಾತೆಯವರ ಪ್ರಭಾವದಿಂದ ಬದಲಾದನಂತೆ.

ಒಂದು ದಿನ, ಶ್ರೀಮಾತೆಯವರ ಜಯಂತಿಯ ಉತ್ಸವದಂದು ನಾನು ಜಯರಾಮಬಾಟಿಗೆ ಹೋಗಿ, ಅಲ್ಲಿ ದಿನವಿಡೀ ಆನಂದದಿಂದ ಕಳೆದು, ಕತ್ತಲಾದ ಮೇಲೆ ಕಾಲುನಡಿಗೆಯಲ್ಲೇ ನಮ್ಮ ಗ್ರಾಮಕ್ಕೆ ಹಿಂದಿರುಗಿದ್ದೆ. ಆಗ ಶಿವು-ಕಾಕಾನಿಗೆ ೮೫ವರ್ಷ ವಯಸ್ಸು. ಕಣ್ಣು ಸರಿಯಾಗಿ ಕಾಣುತ್ತಿರಲಿಲ್ಲ. ಒಂದೆಡೆ ಕುಳಿತು, ಲಾಟೀನಿನ ಬೆಳಕಿನಲ್ಲಿ ತಂಬಾಕು ಸೇವಿಸಲು ಹೊಗೆಸೊಪ್ಪು ಕುಟ್ಟುತ್ತಿದ್ದ. ನನ್ನನ್ನು ನೋಡಿ ಕೇಳಿದ: ''ಏನಪ್ಪಾ, ಇಷ್ಟೊಂದು ಕತ್ತಲಾದ ಮೇಲೆ, ಇಷ್ಟು ತಡಮಾಡಿ ಎಲ್ಲಿಂದ ಬಂದೆ?'' ನಾನಂದೆ: ''ಜಯರಾಮಬಾಟಿಯಲ್ಲಿ ಶ್ರೀಮಾತೆಯವರ ಮನೆಯಲ್ಲಿ ಉತ್ಸವವಿತ್ತು. ಇಡೀದಿನ ಅಲ್ಲಿ ಕಳೆದು, ಸಂಜೆ ಕತ್ತಲಾದ ನಂತರವೇ ಹೊರಟೆ. ಅದಕ್ಕಾಗಿ ತಡವಾಯಿತು.'' ಶಿವು- ಕಾಕಾ ನನ್ನತ್ತ ನೋಡಿ ಕೇಳಿದ, ''ತುಂಬಾ ಮಂದಿ ಭಕ್ತರು, ಸಾಧು-ಸಂನ್ಯಾಸಿಗಳೆಲ್ಲ ಬಂದಿದ್ದರೆ? ಬಹಳ ಪೂಜೆ ಇತ್ಯಾದಿ ನಡೆದವೆ? ಎಲ್ಲರಿಗೂ ಚೆನ್ನಾಗಿ ಪ್ರಸಾದ ವಿತರಣೆ ನಡೆಯಿತೆ?'' ನಾನಂದೆ: ''ಹೌದು ಕಾಕಾ; ತುಂಬಾ ಮಂದಿ ಸಾಧು-ಸಂನ್ಯಾಸಿಗಳು, ಭಕ್ತರು ಬಂದಿದ್ದರು. ಇಡೀದಿನ ಬಹಳ ಭಜನೆ, ಕೀರ್ತನೆ, ಪೂಜೆ ಎಲ್ಲ ನಡೆದವು. ತುಂಬಾ ಜನ ಪ್ರಸಾದ ಭೋಜನ ಪಡೆದರು.''

ನನ್ನ ಮಾತುಗಳನ್ನು ಕೇಳಿ ಶಿವು ಕಾಕಾ ಜೋರಾಗಿ ಧ್ವನಿ ಮಾಡಿ ಅಳುತ್ತಾ ಹೇಳತೊಡಗಿದ: ''ನನಗೆ ಇನ್ನೆಂದಿಗೂ ಜಯರಾಮಬಾಟಿಗೆ ಹೋಗಲಾಗುವುದಿಲ್ಲಪ್ಪಾ. ನಿನ್ನ ತಂದೆ ಏನೇನೋ ಸಾಮಾನುಗಳನ್ನು ಕೊಟ್ಟು ನನ್ನನ್ನು ಜಯರಾಮಬಾಟಿಗೆ ಕಳುಹಿಸಿಕೊಡುತ್ತಿದ್ದರು. ನಾನು ಕೆಳಜಾತಿಯವನು. ಆದರೆ ಶ್ರೀಮಾತೆಯವರು ನನ್ನನ್ನೂ ಬ್ರಾಹ್ಮಣರ ಅಥವಾ ಕಾಯಸ್ಥರ ಹುಡುಗರಂತೆ ಆದರಿಸಿ, ಕಾಳಜಿಯಿಂದ ತಿನ್ನುವುದಕ್ಕೆ ಕೊಡುತ್ತಿದ್ದರು. ಅವರು ನನ್ನನ್ನು ಎಷ್ಟು ಪ್ರೀತಿಸುತ್ತಿದ್ದರು! ಅದನ್ನೆಲ್ಲ ನಾನು ಇನ್ನೆಂದಿಗೂ ಪಡೆಯಲಾರೆ. ಗೊತ್ತೆ? ಒಂದು ದಿನ ನಾನು ಶ್ರೀಮಾತೆಯವರ ಬಳಿಗೆ ಹೋಗಿದ್ದೆ. ಆಗ ಶ್ರೀಮಾತೆಯವರು ಸ್ನಾನ ಮಾಡಲು ಹೊರಟಿದ್ದರು. 'ಶಿವು, ಕುಳಿತುಕೋ. ನಾನು ಈಗಲೇ ಬರುತ್ತೇನೆ' ಎಂದರು. ಸ್ವಲ್ಪ ಹೊತ್ತಿನ ನಂತರ ಶ್ರೀಮಾತೆ ಸ್ನಾನ ಮಾಡಿ ಬಂದು, ನನಗೆ ಬೆಲ್ಲ, ಕಡಲೆಪುರಿ ಹಾಗೂ ಇನ್ನೂ ಹಲವು ಪ್ರಸಾದ ಇತ್ಯಾದಿಗಳನ್ನು ತಿನ್ನಲು ಕೊಟ್ಟರು. ಶ್ರೀಮಾತೆಯವರೇ ಮಾತೆ ಲಕ್ಷ್ಮೀ - ಎಂದು ನಾನು ಭಾವಿಸಿಕೊಂಡೆ. ದೊಡ್ಡ ಮನೆತನದವರಂತೆ ಶ್ರೀಮಾತೆಯವರ ಪಾದಗಳನ್ನು ಸ್ಪರ್ಶಿಸಿ ಪ್ರಣಾಮ ಮಾಡಲು ಸಾಧ್ಯವಾದರೆ ನನ್ನ ಆಸೆ ಪೂರೈಸುವುದು - ಎಂದು ನಾನು ಮನಸ್ಸಿನಲ್ಲೇ ಭಾವಿಸಿದೆ. ಬರುತ್ತೇನೆ ಎಂದು ಹೇಳಿ ದೂರದಿಂದಲೇ ಶ್ರೀಮಾತೆಯವರಿಗೆ ಪ್ರಣಾಮ ಮಾಡಿದೆ. ಶ್ರೀಮಾತೆ ಹೇಳಿದರು, 'ಬಾ ಶಿವು, ಹತ್ತಿರಕ್ಕೆ ಬಂದು ಪ್ರಣಾಮ ಮಾಡು.' ನಾನು ಶ್ರೀಮಾತೆಯವರ ಬಳಿಗೆ ಹೋಗಿ, ಅವರ ಪಾದಗಳನ್ನು ಮುಟ್ಟಿ ಪ್ರಣಾಮ ಮಾಡಿಬಿಟ್ಟೆನಪ್ಪಾ!'' ಈ ಮಾತುಗಳನ್ನು ಹೇಳುತ್ತಾ ಶಿವು ಕಾಕಾ 'ಹಾ! ಹಾ!' ಎನ್ನುತ್ತ ಅಳತೊಡಗಿದ. ಅವನ ಮಾತುಗಳನ್ನು ಕೇಳುತ್ತ ನನ್ನ ಕಣ್ಣುಗಳಲ್ಲೂ ನೀರಿಳಿಯಿತು. ನಾನಂದುಕೊಂಡೆ - ನಾನು ಓದು ಬರಹ ಕಲಿತಿದ್ದೇನೆ, ಮೇಲುಜಾತಿಯವನು; ಅವನಾದರೋ ಹಿಂದೆ ಡಕಾಯಿತ - ಅಪರಾಧಿ, ನಿರಕ್ಷರಸ್ಥ ಹಾಗೂ ಬಾಗ್ದಿ ಜಾತಿಯವನು. ಆದರೆ ಅವನೇ ಧನ್ಯನು. ಶ್ರೀಮಾತೆಯವರಿಂದ ಅವನು ಎಷ್ಟೊಂದು ಆಶೀರ್ವಾದ ಪಡೆದಿದ್ದಾನೆ! ಶಿವು ಕಾಕಾನ ವಿಷಯವನ್ನು ರಾಮಮಯ ಮಹಾರಾಜರಿಗೆ ಹೇಳಿದಾಗ ಅವರು ಭಾವುಕರಾಗಿ ಹೇಳಿದರು : ''ಸೂರ್ಯನ ಕಿರಣಗಳು ತಾವರೆ ಹೂವಿನ ಮೇಲೂ ಬೀಳುವುದು, ಕೊಳಕು ವಸ್ತುಗಳ ಮೇಲೂ ಬೀಳುವುದು. ಅದೇ ರೀತಿ ಶ್ರೀಮಾತೆಯವರ ಪ್ರೀತಿ, ಕರುಣೆ, ಆಶೀರ್ವಾದಗಳು ಒಳ್ಳೆಯವರ, ಕೆಟ್ಟ ವ್ಯಕ್ತಿಗಳ ಮೇಲೂ, ಪಾಪಿಗಳ ಹಾಗೂ ಪುಣ್ಯವಂತರ ಮೇಲೂ ಎಲ್ಲರ ಮೇಲೂ ಸಮಾನವಾಗಿ ಸುರಿಯುತ್ತಿವೆ. ಅದು ಕೆಲವರಿಗೆ ಗೊತ್ತಾಗುವುದು, ಕೆಲವರಿಗೆ ಗೊತ್ತಾಗದು.''